

# ರೆಹಮಾನ್ ಟ್ಯೂನ್‌ಗೆ ಮೈಕಲ್ ಜಾಕ್ಸನ್ ಹಾಡಬೇಕಿತ್ತು

ಎ.ಆರ್. ರೆಹಮಾನ್ ಮೌನಮೋಹಿ. ಅಪರೂಪಕ್ಕೊಂಬಂತೆ ಅವರು ನೆನಪಿನ ಮಾಯಾಪೆಟ್ಟಿಗೆ ತೆಗೆದಿಡುತ್ತಾರೆ. ಇತ್ತೀಚೆಗೆ ಮಲೇಷ್ಯಾದಲ್ಲಿ ಅಭಿಮಾನಿಗಳಿಗೆ ಮುಖಾಮುಖಿಯಾದರು. ಆಗ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಅವೆಲ್ಲವೂ 'ಫ್ರೀ ಮಲೇಷ್ಯಾ ಟುಡೆ' ಎನ್ನುವ ಮಾಧ್ಯಮದಲ್ಲಿ ವಿಡಿಯೊ ರೂಪದಲ್ಲಿ ಸಿಗುತ್ತದೆ.

ಆ ಪ್ರಶ್ನೋತ್ತರದಲ್ಲಿ ಮೈಕಲ್ ಜಾಕ್ಸನ್ ವಿಷಯ ಕೇಳಿಬಂತು. ಎಲ್ಲವೂ ಅಂದುಕೊಂಡಂತೆ ಆಗಿದ್ದಿದ್ದರೆ, ನಾವೀಗ ಮೈಕಲ್ ಜಾಕ್ಸನ್ ಕಂಠದಲ್ಲಿ ತಮಿಳು ಹಾಡಿಗೆ ಕಿವಿಗೊಡುತ್ತಾ ಇರುತ್ತಿದ್ದೆವು.

ಅದು 2009ನೇ ಇಸವಿ. ರೆಹಮಾನ್ ಲಾಸ್‌ಏಂಜಲೀಸ್‌ಗೆ ಹೋಗಿದ್ದರು. ಮೈಕಲ್ ಜಾಕ್ಸನ್ ಅವರನ್ನು ಭೇಟಿ ಮಾಡಿಸಬಲ್ಲ ವ್ಯಕ್ತಿಯೊಬ್ಬರನ್ನು ಕಂಡಿದ್ದರು. ಭೇಟಿಗಾಗಿ ಅನುಮತಿ ಕೇಳಿದರು. ಇ–ಮೇಲ್ ಹಾಕಿ, ಕಾಯಬೇಕು ಎಂಬ ಸಲಹೆ ಅವರಿಂದ ಬಂದಿತ್ತು.

ಇ–ಮೇಲ್ ಹಾಕಿ ಒಂದು ವಾರವಾದರೂ ಉತ್ತರ ಬರಲಿಲ್ಲ. ಅದೇ ಹೊತ್ತಿಗೆ 'ಸ್ಲಂ ಡಾಗ್ ಮಿಲೇನಿಯರ್' ಸಿನಿಮಾದ 'ಜೈ ಹೋ' ಹಾಡು ಆಸ್ಕರ್ ಅಂಗಳ ಪ್ರವೇಶಿಸಿದ ಸುದ್ದಿ ಬಂತು. ಸಹಜವಾಗಿಯೇ ಎಲ್ಲೆಡೆ ಅದು ಪ್ರಚಾರ ಪಡೆದುಕೊಂಡಿತು. ಆಗ ಭೇಟಿಗೆ ಮೈಕಲ್ ಜಾಕ್ಸನ್ ಒಪ್ಪಿಗೆ ಸೂಚಿಸಿದ್ದಾರೆ ಎನ್ನುವ ಉತ್ತರ ಬಂತು. ಆದರೆ, ಆಗ ರೆಹಮಾನ್ ಭೇಟಿ ಮಾಡಲು ಸಿದ್ಧ ಇರಲಿಲ್ಲ. ಮೊದಲು ಆಸ್ಕರ್ ಬರಲಿ, ಆಮೇಲೆ ಭೇಟಿಯಾದರೆ ಆದೀತೆಂದು ಅವರು ಸುಮ್ಮನಾಗಿಬಿಟ್ಟರು.

ಆಸ್ಕರ್ ಪ್ರಶಸ್ತಿಯೂ ಒಲಿದು ಬಂದಿತು. ಪ್ರಶಸ್ತಿ ಪಡೆದ ಮರುದಿನವೇ ಮೈಕಲ್ ಜಾಕ್ಸನ್ ಭೇಟಿಯಾಗಲು ಸಮಯ ನಿಗದಿಪಡಿಸಿಕೊಂಡರು.

ಮೈಕಲ್ ಜೊತೆಗಿನ ಭೇಟಿ ಬೆಚ್ಚಗಿನ ಅನುಭವ ಕೊಟ್ಟಿತು. ತಮ್ಮ ಮಕ್ಕಳನ್ನು ಅವರು ರೆಹಮಾನ್ ಅವರಿಗೆ ಪರಿಚಯ ಮಾಡಿಕೊಟ್ಟರು. ನೃತ್ಯ ಮಾಡುವಾಗ ಹೇಗೆ ಅವರು ಹೃದಯಾಂತರಾಳದಿಂದ ಭಾವ ವ್ಯಕ್ತಪಡಿಸುವುದು ಎನ್ನುವುದರ ಪ್ರಾತ್ಯಕ್ಷಿಕೆ ಕೊಟ್ಟರು. ಮುಂದೆ ಒಂದು ದಿನ ರೆಹಮಾನ್ ಜೊತೆ ಸೇರಿ ಒಂದು ಸಂಗೀತದ ಆಲ್ಬಂ ಮಾಡುವ ಬಯಕೆಯನ್ನೂ ಹೇಳಿಕೊಂಡರು.

ರೆಹಮಾನ್ ಚೆನ್ನೈಗೆ ಮರಳಿದರು. ಆಗ 'ರೋಬೊ' ಸಿನಿಮಾ ಕೆಲಸಗಳು ನಡೆಯುತ್ತಿದ್ದವು. ಆ ಸಿನಿಮಾದಲ್ಲಿ ಮೈಕಲ್ ಜಾಕ್ಸನ್ ಅವರಿಂದಲೇ ಒಂದು ಹಾಡು ಹಾಡಿಸಿದರೆ ಹೇಗೆ ಎಂಬ ಆಲೋಚನೆಯನ್ನು ಶಂಕರ್ ತೇಲಿಬಿಟ್ಟರು. ರೆಹಮಾನ್ ಮಾತುಕತೆಗೆ ಸಿದ್ಧತೆ ನಡೆಸುವ ಹೊತ್ತಿಗೆ, ಅದೇ ವರ್ಷ ಜೂನ್‌ನಲ್ಲಿ ಮೈಕಲ್ ಜಾಕ್ಸನ್ ತೀರಿಹೋದರು.

ಶಂಕರ್ ನಿರ್ದೇಶನದ ಬಹುತೇಕ ಸಿನಿಮಾಗಳಿಗೆ ಎ.ಆರ್. ರೆಹಮಾನ್ ಸಂಗೀತವಿದೆ. ಆದರೆ, 'ಇಂಡಿಯನ್2' ಸಿನಿಮಾಗೆ ಅನಿರುದ್ಧ್ ರವಿಚಂದರ್ ಸಂಗೀತ ನೀಡಿದ್ದಾರೆ. 'ಇಂಡಿಯನ್' ಚಿತ್ರಕ್ಕೂ ರೆಹಮಾನ್ ಸಂಗೀತವಿತ್ತು. ಸದ್ಯಕ್ಕೆ ಅನಿರುದ್ಧ್ ಜನಪ್ರಿಯತೆಯ ಗ್ರಾಫ್ ಉತ್ತುಂಗದಲ್ಲಿ ಇರುವುದರಿಂದ ಶಂಕರ್ ಆಯ್ಕೆ ಅವರೇ ಆಗಿದ್ದಾರೆನ್ನುವುದು ಸತ್ಯ. ■



## ದೊಡ್ಡ ಬಾಗಿಲು ತೆರೆದ ಕಲ್ಕಿ

ಹಿಂದಿ ಚಿತ್ರರಂಗವು ತಲೆ ಕೆರೆದುಕೊಳ್ಳುವ ಸ್ಥಿತಿಯಲ್ಲಿ ಇರುವಾಗಲೇ ದಕ್ಷಿಣ ಭಾರತದ ಸಿನಿಮಾಗಳು ಮತ್ತೊಮ್ಮೆ ಛಾಪು ಮೂಡಿಸುವ ಹಾದಿಯಲ್ಲಿ ಇವೆ. 'ಕಲ್ಕಿ 2898 ಎಡಿ' ಚಿತ್ರವು ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡಿರುವುದು ತಮ್ಮ ಚಿತ್ರಕ್ಕೂ ಶುಭಸೂಚಕ ಎಂದು 'ಕಂಗುವಾ' ತಮಿಳು ಸಿನಿಮಾ ನಿರ್ಮಾಪಕ ಜ್ಞಾನವೇಲ್ ರಾಜಾ ಅಭಿಪ್ರಾಯಪಟ್ಟಿದ್ದಾರೆ.

ಈ ವರ್ಷ ಹಿಂದಿಯ ಯಾವ ಚಿತ್ರವೂ ಗಳಿಕೆಯಲ್ಲಿ 'ಕಲ್ಕಿ' ಮಟ್ಟಕ್ಕೆ ಇರಲಿಲ್ಲ. 'ಇಂಡಿಯನ್ 2', 'ಪುಷ್ಪಾ 2', 'ತಂಗಲಾನ್' ಹಾಗೂ 'ಕಂಗುವಾ' ಸಿನಿಮಾಗಳಿಗೆ ಇಡೀ ದೇಶದಾದ್ಯಂತ ಈಗ ಬೇಡಿಕೆ ಸೃಷ್ಟಿಯಾಗಿದೆ. ಉತ್ತರ ಭಾರತದ ಪ್ರೇಕ್ಷಕರು ಕೂಡ ದಕ್ಷಿಣ ಭಾರತದವರ ಚಿತ್ರಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸತೊಡಗಿದ್ದಾರೆ. ಇದು ದೊಡ್ಡ ಬಜೆಟ್‌ನ ಸಿನಿಮಾ ಮಾಡುವವರಿಗೆ ಇನ್ನಷ್ಟು ಹುಮ್ಮಸ್ಸು ನೀಡುತ್ತದೆ ಎಂದು ಜ್ಞಾನವೇಲ್ ತಮ್ಮದೇ ಅನುಭವ ಹಂಚಿಕೊಂಡಿದ್ದಾರೆ.

'ಕಲ್ಕಿ ಒಂದು ದಿಡ್ಡಿ ಬಾಗಿಲನ್ನು ದೇಶದ ಉದ್ದಗಲಕ್ಕು ತೆರೆದಿಟ್ಟಿದೆ. ನಾವೆಲ್ಲ ಆ ಬಾಗಿಲನ್ನು ಹಾದು ಹೋಗುವುದು ಈಗ ಸಾಧ್ಯವಾಗಿದೆ' ಎನ್ನುವುದು ಅವರ ನಿರೀಕ್ಷೆ. ■